ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

ವಿಷಯ: (ಅ) ಹಿರೇನಂದಿಹಳ್ಳಿಗೆ ಮಂಜೂರಾಗಿದ್ದ ಪ್ರೌಢಶಾಲೆಯನ್ನು ಮುರ್ಕಿನಾವೆಗೆ ವರ್ಗಾಯಿಸಿರುವುದು.

ಶ್ರೀ ಡಿ.ಬಿ.ಇನಾಂದಾರ್ (ಕಿತ್ತೂರು):- ಮಾನ್ಯ ಅಧ್ಯಕ್ಷರೆ, ನನ್ನ ಕಿತ್ತೂರು ಕ್ಷೇತ್ರದ ವ್ಯಾಪ್ತಿಗೊಳಪಡುವ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಹಿರೇನಂದಿಹಳ್ಳಿಗೆ ದಿನಾಂಕ 21ನೇ ಜೂನ್ 1996ರಂದು ಶಿಕ್ಷಣ ಇಲಾಖೆಯಿಂದ ಒಂದು ಪ್ರೌಢಶಾಲೆ ಮಂಜೂರಾಗಿದ್ದು, ಆ ಶಾಲೆ ನಾಲ್ಕನೇ ಜುಲೈ 1996ರಂದು ಪ್ರಾರಂಭವಾಯಿತು, ಶಾಲೆಗೆ ಒಬ್ಬ ಶಿಕ್ಷಕರನ್ನು ಸಹ ನೇಮಿಸಲಾಗಿದ್ದಿತು. ಆದರೆ, ಶಾಲೆ ಪ್ರಾರಂಭವಾಗಿ ನಾಲ್ಕು ದಿವಸಗಳಾದ ನಂತರ ಸದರಿ ಶಾಲೆಯನ್ನು ಮುರ್ಕಿನಾವೆ, ಬೈಲಹೊಂಗಲ ತಾಲ್ಲೂಕು, ಬೆಳಗಾಂ ಜಿಲ್ಲೆಗೆ ವರ್ಗಾಯಿಸಿರುವುದು ಸರಿಯಲ್ಲ. ಆದ್ದರಿಂದ ದಯಮಾಡಿ ಮೊದಲು ಪ್ರೌಢಶಾಲೆಯನ್ನು ಮಂಜೂರು ಮಾಡಿದ ಸ್ಥಳದಲ್ಲಿಯೇ ಪುನಃ ಪ್ರಾರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಮಂಜೂರಾಗಿದ್ದ ಶಾಲೆಯನ್ನು ಬೇರೆಡೆಗೆ ವರ್ಗಾಯಿಸಿರುವ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ಇದೇ ರೀತಿ ನಾಲ್ಕೈದು ಕಡೆಗಳಲ್ಲಿ ಸರ್ಕಾರ ಶಾಲೆಗಳನ್ನು ಮಂಜೂರು ಮಾಡಿ, ಆ ಶಾಲೆಗಳು ಪ್ರಾರಂಭವಾದ ಐದಾರು ದಿವಸಗಳ ನಂತರ ಶಾಲೆಗಳನ್ನು ಮುಚ್ಚಬೇಕೆಂದು ಟೆಲಿಗ್ರಾಂ ಕೊಟ್ಟು, ಬೇರೆಡೆಗೆ ವರ್ಗಾಯಿಸುತ್ತಾರೆ. ಇದು ಸರಿಯಲ್ಲ.

ಅಧ್ಯಕ್ಷರು:- ಮೊನ್ನೆ ದಿವಸ ಮಾನ್ಯ ಸದಸ್ಯರಾದ ದೇವುನಾಯಕ್ ಬೆಳಮಗಿಯವರು ಹೇಳಿದರು: ಪ್ರತಿಪಕ್ಷದಿಂದ ಆರಿಸಿಬಂದಿರುವ ಶಾಸಕರ ಮತಕ್ಷೇತ್ರದಲ್ಲಿ ಈ ರೀತಿಯಾದಾಗ kindly see that some remedial measure is taken.

ಶ್ರೀ ಜೆ.ಹೆಚ್.ಪಟೇಲ್:- ಇಂತಹ ಪ್ರಕರಣಗಳಿದ್ದರೆ ತರಿಸಿಕೊಂದು ನೋಡುತ್ತೇನೆ.

(ಆ) ಪೌರ ಕಾರ್ಮಿಕರಿಗೆ ಸರಿಯಾಗಿ ಸಂಬಳ ಪಾವತಿಗೆ ಒತ್ತಾಯ.

+ಶ್ರೀ ಬಿ.ಎನ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಮಗೆ ಸರಿಯಾಗಿ ತಿಂಗಳ ಒಂದನೆಯ ತಾರೀಖು ಸಂಬಳ ಸಿಗುತ್ತಿಲ್ಲ; ಡಾ.ಜಿ.ತಿಮ್ಮಯ್ಯರವರು ನೀಡಿರುವ ವರದಿಯನ್ನು ಜಾರಿಗೆ ತಂದು, ನೆಮ್ಮದಿಯಿಂದ

ಬದುಕಲು ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ಸಾವಿರಾರು ಪೌರಕಾರ್ಮಿಕರು ಇಲ್ಲಿಗೆ ಬಂದು ಪ್ರತಿಭಟನಾ ಮೆರವಣಿಗೆಯನ್ನು ಮಾಡುತ್ತಿದ್ದಾರೆ. ಈ ಹಿಂದೆ ಇದರ ಬಗ್ಗೆಯೇ ಅವರು ತಿಂಗಳಗಟ್ಟಲೆ ಸತ್ಯಾಗ್ರಹವನ್ನು ಮಾಡಿದರು. ಆ ಸಮಯದಲ್ಲಿ ಪುರಸಭೆಯ ನೌಕರರಿಗೆ ಖಜಾನೆಯ ಮೂಲಕ ಸಂಬಳವನ್ನು ಕೊಡಲು ಅಂದಿನ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಅರ್ಥ ಸಚಿವರಾದ ಮಾನ್ಯ ಸಿದ್ದರಾಮಯ್ಯನವರು ಗೃಹ ಸಚಿವರಾಗಿದ್ದಂಥ ಸಿಂಧ್ಯಾರವರು ಆ ಸಮಿತಿಯಲ್ಲಿದ್ದರು. ಅವರು ಒಂದು ವರದಿಯನ್ನು ಸಹ ಕೊಟ್ಟಿದ್ದರು. ಆ ಸಮಯದಲ್ಲಿ ಆ ಖಾತೆಗೆ ಮೋಟಾರು ತೆರಿಗೆ ಅನುದಾನ ಆಕ್ಟ್ರಾಯ್ ಅನುದಾನ, ಮನರಂಜನಾ ತೆರಿಗೆ ಅನುದಾನ ಮತ್ತು ಸ್ಟ್ಯಾಂಪ್ ಡ್ಯೂಟಿ ಮೇಲೆ ಸರ್‌ಚಾರ್ಜ್‌ಗಳನ್ನು ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರಲೇ ಈ ಗ್ರಾಂಟ್‌ಗಳನ್ನು ಹೊಂದಾಣಿಕೆ ಮಾಡಲು ಮತ್ತು ಅವರು ಸಹಿ ಮಾಡಲು ಅವಕಾಶವನ್ನು ಕೊಟ್ಟು ಒಂದನೇ ತಾರೀಖು ಸಂಬಳವನ್ನು ಪೌರಕಾರ್ಮಿಕರಿಗೆ ಪಾವತಿ ಮಾಡತಕ್ಕ ವ್ಯವಸ್ಥೆಯಾಗಿತ್ತು. ಅದರೆ ನಾವೇನು ಇಂದು ನಗರ ಪ್ರದೇಶ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಗ್ರಾಂಟ್‌ನ್ನು ಕೊಡುತ್ತಿದ್ದೇವೆ ಅದು ಸಮರ್ಪಕವಾಗಿಲ್ಲ. ಆದ್ದರಿಂದ ಎರಡು ಮೂರು ತಿಂಗಳುಗಳಾದರೂ ಪೌರಕಾರ್ಮಿಕರಿಗೆ ಸಂಬಳವನ್ನು ಕೊಡದಿರುವ ಸಾವಿರಾರು ಉದಾಹರಣೆಗಳಿವೆ ಅಗತ್ಯ ವಸ್ತುಗಳ ಬೆಲೆಯು ಗಗನಕ್ಕೇರಿರುವ ಇಂದಿನ ದಿವಸಗಳಲ್ಲಿ ಅವರುಗಳು ಭಿಕ್ಷುಕರಂತೆ ಬಡ್ಡಿಗೆ ಹಣವನ್ನು ತೆಗೆದುಕೊಂಡು ಜೀವನ ಮಾಡುತ್ತಿರತಕ್ಕ ಪರಸ್ಥಿತಿಯನ್ನು ನಾವು ಇಂದು ಕಾಣುತ್ತಿದ್ದೇವೆ. ಅತ್ಯಂತ ಅವಶ್ಯಕತೆಯಿರುವ ಈ ಸೇವೆಯನ್ನೇನು ಪೌರಕಾರ್ಮಿಕರು ಮಾಡುತ್ತಿದ್ದಾರೆ ಅವರುಗಳಿಗೆ ಸಮಯಕ್ಕೆ ಸರಿಯಾಗಿ ತಿಂಗಳಿಗೆ ಒಮ್ಮೆ ಸಂಬಳ ಕೊಡದೆ ಅವರು ಹೋರಾಟ ಮಾಡತಕ್ಕ ಪರಿಸ್ಥಿತಿಯನ್ನು ಕಳೆದ ಅನೇಕ ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಸರ್ಕಾರದಿಂದ ಐವತ್ತೈದು ಕೋಟಿ ರೂಪಾಯಿ ಗ್ರಾಂಟ್‌ನ್ನು ಬೇರೆ ಬೇರೆ ಪುರಸಭೆಗಳಿಗೆ ಕೊಡುತ್ತಿದ್ದೀರಿ. ಇನ್ನೂ ಇಪ್ಪತ್ತು ಕೋಟಿ ಹೆಚ್ಚಿನ ಗ್ರಾಂಟ್‌ನ ಅಗತ್ಯತೆ ಇದೆಯೆಂದು ನಾವು ಕೇಳುತ್ತಿದ್ದೇವೆ. ಜನವರಿ 1, 1996ರಿಂದ ಖಜಾನೆಯಿಂದ ಸಂಬಳವನ್ನು ಪಾವತಿ ಮಾಡಲು ಕ್ರಮ ತೆಗೆದುಕೊಂಡಿದ್ದೀರಿ. ಆದರೆ ಬಹುತೇಕ ಕಡೆಗಳಲ್ಲಿ ಹಣವು ಸಫೀಷಿಯಂಟ್ ಇಲ್ಲದಿರುವುದರಿಂದ ತಿಂಗಳಿಗೊಮ್ಮೆ ಎಲ್ಲೂ ಸರಿಯಾಗಿ ಸಂಬಳ ಪಾವತಿಯಾಗುತ್ತಿಲ್ಲ. ತಮಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ 205 ನಗರ ಪ್ರದೇಶಗಳಿವೆ, ಅದರಲ್ಲಿ ಕೇವಲ 31 ಪಟ್ಟಣಗಳಲ್ಲಿ ಒಳಚರಂಡಿ ಯೋಜನೆ ಇದೆ. ಉಳಿದಿರುವ 124 ಪ್ರದೇಶಗಳಲ್ಲಿ ವಿಶೇಷವಾದಂಥ ಸ್ವಚ್ಚತೆಯ ಬಗೆಗಿನ ಶ್ರಮವು ಪೌರ ಕಾರ್ಮಿಕರಂಗ ಆಗುತ್ತಿದೆ. ಅವರಿಗೆ ಸರಿಯಾಗಿ ಸಂಬಳ ದೊರೆಯುತ್ತಿಲ್ಲವೆಂದು ಆಕ್ರೋಶಗೊಂಡು ಇಲ್ಲಿಗೆ ಬಂದಿದ್ದಾರೆ. ಹಿಂದೆ ಅವರುಗಳು ಒಂದು ತಿಂಗಳ ಕಾಲ ಧರಣಿ ಸತ್ಯಾಗ್ರಹ ಮಾಡಿದಂಥ ಕಾಲದಲ್ಲಿ ಎಲ್ಲಾ ನಗರಗಳು ಕೊಳೆತು ನಾರುವಂಥ ಪರಿಸ್ಥಿತಿ ಬಂದಿತ್ತು. ಸರ್ಕಾರ ಅವರುಗಳ ಮನವೊಲಿಸಿ ಅವರಿಗೆ ಸರಿಯಾಗಿ ತಿಂಗಳಿಗೊಮ್ಮೆ ಸಂಬಳವನ್ನು

ಕೊಡುತ್ತೇವೆಂಬ ಭರವಸೆಯನ್ನು ಕೊಟ್ಟಮೇಲೆ ಅವರು ಹೋರಾಟವನ್ನು ವಾಪಸ್ ತೆಗೆದುಕೊಂಡರು. ಆದರೆ ಇವತ್ತು ಮತ್ತೆ ರಾಜ್ಯಾದ್ಯಂತ ಪೌರ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಪ್ರತಿಭಟನೆ ಮಾಡುತ್ತಾ ಡಾ: ಜಿ.ತಿಮ್ಮಯ್ಯನವರ ವರದಿಯನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಸರ್ಕಾರಿ ನೌಕರರಿಗೇನು ತಿಂಗಳಿಗೆ ಸರಿಯಾಗಿ ಸಂಬಳ ನೀಡುತ್ತಿದ್ದೀರೋ ಅದಕ್ಕಿಂತ ಹೆಚ್ಚು ಆದ್ಯತೆ ಕೊಟ್ಟು ಪೌರ ಕಾರ್ಮಿಕರಿಗೂ ತಿಂಗಳಿಗೆ ಒಂದು ಸಲ ಸರ್ಕಾರದ ಖಜಾನೆಯಿಂದ ಸಂಬಳ ಸಿಗುವಂಥ ವ್ಯವಸ್ಥೆಯಾಗಬೇಕು. ಮತ್ತು ರಾಜ್ಯದ ಹಣಕಾಸು ಆಯೋಗವು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹೆಚ್ಚಿಸಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಗ್ರಾಮೀಣ ಪ್ರದೇಶಕ್ಕೆ ಮತ್ತು ಪುರಸಭೆಗಳಿಗೆ ಅನುದಾನವನ್ನು ಹೆಚ್ಚಿಸುವ ಬಗ್ಗೆ ವರದಿಯೇನೂ ಬಂದಿಲ್ಲ. ಆದ್ದರಿಂದ ತಾವು ಡಾ:ಜಿ.ತಿಮ್ಮಯ್ಯನವರ ವರದಿಯನ್ನು ಜಾರಿಗೆ ತಂದರೆ, ಅವರ ಸಲಹೆಯನ್ನು ಸರ್ಕಾರ ಒಪ್ಪಿಕೊಂಡರೆ ಪೌರ ಕಾರ್ಮಿಕರು ಆಗಾಗ್ಗೆ ಸತ್ಯಾಗ್ರಹ, ಚಳುವಳಿಯನ್ನು ಮಾಡುವುದು ತಪ್ಪುತ್ತದೆ. ಇಂದು ರಾಜ್ಯದ ಉದ್ದಗಲಕ್ಕೂ ಅವರು ಸತ್ಯಾಗ್ರಹ ಮಾಡುತ್ತಿರುವ ಸಮಯದಲ್ಲಿ, ನಾನೂ ಈ ಹಿಂದೆ ಅವರುಗಳ ಸತ್ಯಾಗ್ರಹದಲ್ಲಿ ಕುಳಿತು ಮಾತುಕತೆಯಾಡಿ, ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ಪರಿಹಾರವನ್ನು ಹುಡುಕುತ್ತೇವೆಂದು ಹೇಳಿ ಸದನದಲ್ಲಿ ಪ್ರಸ್ತಾಪ ಮಾಡಿ ನಿಮ್ಮ ಸರ್ಕಾರವಿದ್ದಾಗ ಅದರ ಬಗ್ಗೆ ಒಂದು ಸಮಿತಿಯನ್ನು ಮಾಡಿ ವರದಿಯನ್ನು ಕೊಟ್ಟಿದ್ದೆ. ಆದರೆ ಆ ವರದಿಯು ಕಾರ್ಯರೂಪಕ್ಕೆ ಬಂದಿಲ್ಲ. ಏಕೆಂದರೆ ತಾವು ಕೊಡುತ್ತಿರುವ ಹಣವು ಸಫೀಷಿಯಂಟ್ ಆಗಿಲ್ಲದಿರುವುದರಿಂದ ಚೆಕ್ ಕೊಟ್ಟರೂ ಸಂಬಳ ಸರಿಯಾಗಿ ಸಿಗುತ್ತಿಲ್ಲ. ಅವರುಗಳು ಸತ್ಯಾಗ್ರಹವನ್ನು ಮುಗಿಸಿ ವಾಪಸ್ ಹೋಗಬೇಕಾಗಿದೆ. ಅವರುಗಳು ಅವರವರ ಕೆಲಸಕಾರ್ಯಗಳಲ್ಲಿ ಮಗ್ನರಾಗಬೇಕಾಗಿದೆ. ಮತ್ತೆ ಮತ್ತೆ ಅವರುಗಳು ಈ ರೀತಿ ಸತ್ಯಾಗ್ರಹ ಮತ್ತು ಚಳುವಳಿಯನ್ನು ಮಾಡದಿರುವ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಅವರನ್ನು ಕರೆದು ಮಾತನಾಡಿ ತಿಂಗಳಿಗೆ ಒಂದು ಸಾರಿ ಅವರಿಗೆ ಸರಿಯಾಗಿ ಸಂಬಳ ಕೊಡುವ ಬಗ್ಗೆ ಭರವಸೆ ನೀಡಬೇಕು, ಅವರುಗಳು ಭಿಕ್ಷುಕರಂತೆ ಅಲೆಯುವಂಥ ಪರಿಸ್ಥಿತಿಯನ್ನು ತಪ್ಪಿಸಬೇಕು. ಬಹುತೇಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರೇ ಅಲ್ಲಿ ಕೆಲಸ ಮಾಡುತ್ತಿರುವುದರಿಂದ, ಇವತ್ತು ದಿನಬಳಕೆ ವಸ್ತುಗಳು ಗಗನಕ್ಕೇರಿರುವ ಪರಿಸ್ಥಿತಿಯಲ್ಲಿ ನಾಲ್ಕಾರು ದಿವಸಗಳ ಕಾಲ ಸಂಬಳ ತಡವಾದರೆ ಜೀವನ ಮಾಡುವುದು ಹೇಗೆ? ಆದ್ದರಿಂದ ತಿಂಗಳಿಗೊಮ್ಮೆ ಸರಿಯಾಗಿ ಸಂಬಳ ಕೊಡುವ ಬಗ್ಗೆ ಮತ್ತು ಡಾ:ಜಿ.ತಿಮ್ಮಯ್ಯನವರ ವರದಿಯು ಜಾರಿಗೆ ತರುವುದರ ಬಗ್ಗೆ ವಿಶೇಷವಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಈಗಾಗಲೇ ಹೇಳಿರುವಂತೆ, ಆಕ್ಟ್ರಾಯ್ ಅಬಾಲಿಷ್ ಆದಮೇಲೆ ನಗರಪಾಲಿಕೆಗಳಲ್ಲಾಗಲಿ, ಕಾರ್ಪೊರೇಷನ್‌ಗಳಲ್ಲಾಗಲಿ, ಮುನಿಸಿಪಾಲಿಟಿನಲ್ಲಾಗಲಿ,

ಅಲ್ಲಿನ ಹಣಕಾಸಿನ ತೊಂದರೆ ಬಹಳ ಜಾಸ್ತಿಯಾಗಿದೆ. ಆಕ್ಟ್ರಾಯ್ ಅಬಾಲಿಷ್ ಆದಮೇಲೆ ಅವರುಗಳಿಗೇನು ಪರ್‌ಸೆಂಟೇಜ್‌ನ್ನು ಹೆಚ್ಚು ಮಾಡಿಕೊಂಡು ಹೋಗಬೇಕಾಗಿತ್ತು. ಆ ರೀತಿ ಹೆಚ್ಚು ಪಾಲು ಕೊಡುತ್ತಿಲ್ಲ. ಇವುಗಳ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಾಗಬೇಕೆಂದು ಹಲವಾರು ಸಮಿತಿಗಳನ್ನು ಮಾಡಲಾಗಿತ್ತು. ನಾನೂ ಮುನಿಸಿಪಲ್ ಫೈನಾನ್ಸ್ ಎನ್‌ಕ್ವೈರಿ ಸಮಿತಿಯ ಅಧ್ಯಕ್ಷನಾಗಿ ನಮ್ಮಲ್ಲಿರುವ 220 ಮುನಿಸಿಪಾಲಿಟಿಗಳಿಗೆ ಭೇಟಿ ಕೊಟ್ಟು ಒಂದು ವರದಿಯನ್ನು ಕೊಟ್ಟಿದ್ದೇನೆ. ಅನಂತರ ಆಕ್ಟ್ರಾಯ್ ಅಬಾಲಿಷ್ ಆಯಿತು. ಆದರೆ ಅದಕ್ಕೆ ತಕ್ಕಂತೆ ಅಂದರೆ ಮೋಟಾರ್ ವಾಹನ ತೆರಿಗೆಯಲ್ಲಿ, ಮಾರಾಟ ತೆರಿಗೆಯಲ್ಲಾಗಲಿ, ಅಬ್ಕಾರಿಯಲ್ಲಿ ಬರತಕ್ಕ ಆದಾಯದಲ್ಲಿ ಅವರಿಗೆ ಪರ್‌ಸೆಂಟೇಜ್ ಹೆಚ್ಚು ಮಾಡಿಕೊಂಡು ಹೋಗಿಲ್ಲ. ತಂಬಾಕು, ಸಕ್ಕರೆ ಮತ್ತು ಜವಳಿ ಈ ಮೂರರ ಮೇಲೆ ಮೊದಲು ಸೇಲ್ ಟ್ಯಾಕ್ಸ್ ಇರಲಿಲ್ಲ. ಆಕ್ಟ್ರಾಯ್ ಇತ್ತು. ಆದರೆ ಆಕ್ಟ್ರಾಯ್‌ನ್ನು ಅಬಾಲಿಷ್ ಮಾಡಿದಮೇಲೆ ಅವರುಗಳಿಗೆ ಬರತಕ್ಕ ಆದಾಯ ಜಾಸ್ತಿಯಾಗಿಲ್ಲ. ಆದ್ದರಿಂದ ಇವುಗಳಿಗೆ ಹೆಚ್ಚಿನ ಗ್ರಾಂಟ್‌ನ್ನು ಕೊಟ್ಟರೆ ಪ್ರತಿ ತಿಂಗಳು ಪೌರಕಾರ್ಮಿಕರಿಗೆ ಸರಿಯಾಗಿ ಸಂಬಳವನ್ನು ಕೊಡಲು ಸಾಧ್ಯವಾಗುತ್ತದೆ. ನನಗೂ ಹಲವಾರು ಟೆಲಿಗ್ರಾಂಗಳು ಬಂದಿದೆ. ಅನೇಕ ಕಡೆಗಳಲ್ಲಿ ಸರಿಯಾದ ಆರ್ಥಿಕ ವ್ಯವಸ್ಥೆಯಲ್ಲದ ಕಾರಣ ಮುನಿಸಿಪಾಲಿಟಿಗಳಲ್ಲಿ ಪೌರ ಕಾರ್ಮಿಕರಿಗೆ ಮೂರ್‌ನಾಲ್ಕು ತಿಂಗಳು ಸಂಬಳ ಸಿಕ್ಕಿಲ್ಲ. ಆದ್ದರಿಂದ ಬಹಳಷ್ಟು ಪೌರಕಾರ್ಮಿಕರು ಖಾಸಗಿಯಾಗಿ ಸಾಲ ದೊರೆಯುವ ಸಿಂಧಿಗಳು, ಸೇಠುಗಳ ಹತ್ತಿರ ಇಪ್ಪತ್ತು ಇಪ್ಪತ್ತೈದು ಪರ್‌ಸೆಂಟ್‌ಗೆ ಸಾಲವನ್ನು ತೆಗೆದುಕೊಂಡು ಸಂಬಳ ಬಂದ ಕೂಡಲೇ ಅವರಿಗೆ ಹಣವನ್ನು ವಾಪಸ್ ಮಾಡಿ ಪುನರ್ ಸಾಲವನ್ನು ತೆಗೆದುಕೊಂಡು ಜೀವನ ಮಾಡುತ್ತಿದ್ದಾರೆ. ತಾವೇನು ಗ್ರಾಂಟನ್ನು ಕೊಡುತ್ತೀರಿ ಅದರಿಂದ ಮುನಿಸಿಪಾಲಿಟಿಯವರು ಗುತ್ತಿಗೆದಾರರಿಗೆ ಬಿಲ್ಲನ್ನು ಸಂದಾಯ ಮಾಡಲು, ವಿದ್ಯುತ್ ದೀಪಕ್ಕೆ ಆದ ವೆಚ್ಚವನ್ನು ಬರಿಸಲು ಉಪಯೋಗ ಮಾಡಿಬಿಡುತ್ತಾರೆ. ಆದ್ದರಿಂದ ಪೌರ ಕಾರ್ಮಿಕರಿಗೆ ಸಂಬಳ ಸಿಗುವುದಿಲ್ಲ. ಆದ್ದರಿಂದ ಇಲ್ಲಿಂದ ಚಕ್ ನೇರವಾಗಿ ಹೋದರೆ ಅವರಿಗೆ ಸಂಬಳ ದೊರೆಯುತ್ತದೆ. ಆದ್ದರಿಂದ ಇತರೆ ಸರ್ಕಾರಿ ನೌಕರರಿಗೆ ಇಲ್ಲಿನ ಖಜಾನೆಯಿಂದ ಯಾವ ರೀತಿ ಚಕ್ ಹೋಗುತ್ತದೆ ಅದೇ ರೀತಿ ಅವರಿಗೂ ಸಂಬಳವನ್ನು ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕೆಂದಿರುವುದನ್ನು ಮಾನ್ಯ ಖರ್ಗೆಯವರು ಈಗಾಗಲೇ ಹೇಳಿದ್ದಾರೆ. ಏಡೆಡ್ ಕಾಲೇಜ್‌ಗಳು, ಹೈಸ್ಕೂಲ್‌ಗಳವರಿಗೆ ನೇರವಾಗಿ ಚಕ್ ಮೂಲಕ ಸಂಬಳ ಕೊಡುತ್ತೀರಿ. ಅದೇ ರೀತಿ ಪೌರ ಕಾರ್ಮಿಕರ ಸಂಬಳ ಸಾರಿಗೆಯನ್ನು ಲೆಕ್ಕಮಾಡಿ ಚೆಕ್ ಮೂಲಕ ನೇರವಾಗಿ ಕೊಟ್ಟರೆ ಈ ಸಮಸ್ಯೆ ಪರಿಹಾರವಾಗುತ್ತದೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯ್

ಪದ್ಧತಿ ಇದ್ದರೆ ಪುರಸಭೆಗಳು ತಮ್ಮಕಾಲಮೇಲೆ ನಿಲ್ಲುತ್ತಿದ್ದವು. ಆಕ್ಟ್ರಾಯ್ ಪದ್ಧತಿಯನ್ನು ತೆಗೆದರೆ ಒಳ್ಳೆಯ ಆದರ್ಶಮಯವೆನ್ನತಕ್ಕ ರೀತಿಯಲ್ಲಿ ಇಲ್ಲಿ ಕೆಲವರು ಮಾತನಾಡಿದ್ದುದು ಇದೆ. ಈ ಆಕ್ಟ್ರಾಯ್‌ನ್ನು ತೆಗೆದಿರುವುದರಿಂದ ಪುರಸಭೆಯ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಪ್ರತಿ ವರ್ಷ ಕಾಡಿ ಬೇಡಿ ಭಿಕ್ಷೆ ಬೇಡಿ ಇವರು ಕೊಟ್ಟ ಹಣವನ್ನು ತೆಗೆದುಕೊಂಡು ಹೋಗಿ ಪುರಸಭೆಗಳಲ್ಲಿ ಖರ್ಚು ಮಾಡತಕ್ಕ ಪರಿಸ್ಥಿತಿಯಾಗಿದೆ. ಆದ್ದರಿಂದ ತಾವು ಮತ್ತೆ ಆಕ್ಟ್ರಾಯ್ ಪದ್ಧತಿಯನ್ನು ಧೈರ್ಯವಾಗಿ ತರಬೇಕು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅದನ್ನು ಜಾರಿಗೆ ತಂದರೆ ಮುನಿಸಿಪಾಲಿಟಿಯವರು ಅವರದ್ದೇ ಆದಂಥ ಹಣದ ಸಂಪನ್ಮೂಲವನ್ನು ಮಾಡಿಕೊಳ್ಳಬಹುದು, ಎಷ್ಟು ಹಣವನ್ನು ಖರ್ಚು ಮಾಡಬಹುದು ಎಂಬದಕ್ಕೆ ವ್ಯವಸ್ಥೆ ಇರುತ್ತದೆ. ಆದ್ದರಿಂದ ಆಕ್ಟ್ರಾಯ್‌ನ್ನು ಮತ್ತೆ ತರುವ ದಿಟ್ಟ ನಿರ್ಧಾರವನ್ನು ತಮ್ಮ ಸರ್ಕಾರ ತೆಗೆದುಕೊಳ್ಳಬೇಕು. ಕೆಲವು ಪುರಸಭೆಗಳಲ್ಲಿ ಪೌರ ಕಾರ್ಮಿಕರ ಪೊರಕೆಗಳನ್ನು ತೆಗೆದುಕೊಳ್ಳಲು ಹಣವಿಲ್ಲ. ಅನೇಕ ಪುರಸಭೆಗಳಲ್ಲ ಕಣ್ಣೀರಿನ ಕತೆಯಾಗಿದೆ. ನಾವು ಸುಮ್ಮನೆ ವಿಕೇಂದ್ರೀಕರಣವೆಂದು ಹೇಳಿ ಚುನಾವಣೆ ಮಾಡಿದ್ದೇವೆ, ಅಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಆದರೆ ಅಲ್ಲಿ ಕಸ ಗುಡಿಸುವ ಪೊರಕೆಗಳನ್ನು ಕೊಂಡುಕೊಳ್ಳಲು ಹಣವಿಲ್ಲ. ಪೌರ ಕಾರ್ಮಿಕರ ಪರಿಸ್ಥಿತಿ ಕಣ್ಣೀರಿನ ಚಿಂತಾಜನಕದ್ದಾಗಿದೆ. ಆದ್ದರಿಂದ ಡಾ: ಜಿ.ತಿಮ್ಮಯ್ಯನವರ ವರದಿಯೇನಿದೆ ಅದನ್ನು ಸರ್ಕಾರ ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು, ಮತ್ತು ಈ ವರದಿಯಲ್ಲಿ ಎಷ್ಟು ಸಲಹೆಗಳು ಬಂದಿದೆ ಯಾವಾಗ ಈ ವರದಿ ಬಂದಿದೆ? ಎಷ್ಟು ಅಂಶವನ್ನು ಒಪ್ಪಿಕೊಳ್ಳುತ್ತೀರಿ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಆಕ್ಟ್ರಾಯ್ ಪದ್ಧತಿಯನ್ನು ಜಾರಿಗೆ ತಂದೇ ತನ್ನಿ, ಇದರಿಂದ ತಮ್ಮ ಹೊರೆಯೂ ಕಡಿಮೆಯಾಗಿ ಅವರುಗಳು ಅವರದ್ದೇ ಸಂಪನ್ಮೂಲವನ್ನು ರೂಢಿಸಿಕೊಳ್ಳಲು ಸಹಾಯಕವಾಗುತ್ತದೆ.

+ಶ್ರೀ ಎಂ.ದಿವಾಕರಬಾಬು (ಬಳ್ಳಾರಿ):- ಮಾನ್ಯ ಅಧ್ಯಕ್ಷರೆ, ಇಂದು ಪೌರಕಾರ್ಮಿಕರೇನು ರಾಜ್ಯದ ಎಲ್ಲಾ ಕಡೆಗಳಿಂದ ಇಲ್ಲಿಗೆ ಚಳುವಳಿಗಾಗಿ ಬಂದಿದ್ದಾರೆ ಅವರು ಎಷ್ಟು ಕಷ್ಟಪಟ್ಟು ಬಸ್ಸು, ರೈಲುಗಳಲ್ಲಿ ಬಂದಿದ್ದಾರೆಂಬುದು ನಮಗೆ ಗೊತ್ತಿದೆ. ಮೂರ್‌ನಾಲ್ಕು ತಿಂಗಳಿಂದ ಸಂಬಳವಿಲ್ಲದೆ ಅವರು ಭಿಕ್ಷೆ ಬೇಡಿ ಹಣವನ್ನು ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆ, ತಿಂಗಳ ಮೊದಲ ತಾರೀಖು ಏನು ಸಂಬಳ ಮೊದಲು ಕೊಡುತ್ತಿದ್ದರು. ಅದೂ ಸಹ ಕಳೆದ ಮೂರು ತಿಂಗಳಿಂದ ಇಲ್ಲದಂತಾಗಿದೆ. ಆಕ್ಟ್ರಾಯ್ ತೆಗೆದಿದ್ದರಿಂದ ಮುನಿಸಿಪಾಲಿಟಿಗಳಿಗೆ ಬಹಳಷ್ಟು ಅನ್ಯಾಯವಾಗಿದೆ. ಒಂದೊಂದು ಮುನಿಸಿಪಾಲಿಟ ಏನು ಕಲೆಕ್ಟ್ ಮಾಡುತ್ತಿದೆ, ಅವರ ಗ್ರಾಂಟ್ ಇವತ್ತು ಏನು ಬರುತ್ತಿದೆ, ಆಕ್ಟ್ರಾಯ್ ಇವತ್ತು ಆಕ್ಚುಯಲಿ ಕಲೆಕ್ಟ್ ಆಗುವುದಕ್ಕೆ, ಅಲ್ಲಿ ಅವರಿಗೆ ಅಲಾಟ್‌ಮೆಂಟ್ ಆಗುವುದು ಶೇಕಡ 25ರಷ್ಟು ಪರ್ಸೆಂಟೂ ಬರುತ್ತಿಲ್ಲ, ಪ್ರೊಫೆಷನಲ್ ಟ್ಯಾಕ್ಸ್ ಇತ್ತು, ಪ್ರೊಫೆಷನ್ ಟ್ಯಾಕ್ಸ್ ಕಂಪ್ಲೀಟ್ ಆಗಿ ಅಬಾಲಿಷ್ ಮಾಡಿ ಅದು ಮುನಿಸಿಪಾಲಿಟಿಗಳಿಗೆ ಬರದಂತೆ ಮಾಡಿದ್ದೀರಿ. ಇನ್ನು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್,

ಅದರಲ್ಲಿ ಕಲೆಕ್ಟ್ ಮಾಡಿ ಶೇಕಡ 90ರಷ್ಟು ಮುನಿಸಿಪಾಲಿಟಿಗಳಿಗೆ ಬರುತ್ತಿತ್ತು. ಅದನ್ನೂ ತೆಗೆದು ಹಾಕಿ, ಪಾಪುಲ್ಯೇಷನ್‌ವೈಸ್ ರಿವೈಸ್ ಮಾಡಿ, ಈಗ ಶೇಕಡ 35ರಷ್ಟು ಮಾತ್ರ ಮುನಿಸಿಪಾಲಿಟಿಗಳಿಗೆ ಬರುತ್ತಿದೆ. ಇದೆಲ್ಲಾ ರಾಜ್ಯದ ಖಜಾನೆಗೆ ಹೋಗುವುದಾಗಲಿ, ರಾಜ್ಯದ ಖಜಾನೆಯಿಂದ ಮತ್ತೆ ಮುನಿಸಿಪಾಲಿಟಿಗಳಿಗಾಗಲಿ, ಪುರಸಭೆಗಳಿಗಾಗಲಿ, ಯಾವುದಕ್ಕಾಗಲಿ ಬರಲಿಲ್ಲ. ಆಕ್ಟ್ರಾಯ್‌ನಿಂದ ಆಗಲೀ, ಪ್ರೊಫೆಷನ್ ಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್, ಮೋಟಾರ್ ವೆಹಿಕಲ್ ಟ್ಯಾಕ್ಸ್, ಮತ್ತು ಸ್ಟಾಂಪ್ ಡ್ಯೂಟಿ, ಇವೆಲ್ಲದರಿಂದ ಏನು ಸರ್ಕಾರ ಕಲೆಕ್ಟ್ ಮಾಡುತ್ತಿದೆ, ಅದನ್ನು ಮಿನಿಸಿಪಾಲಿಟಿಗಳಿಗೆ ಪುನಃ ಥ್ರೂ ಗೌರ್ನಮೆಂಟ್ ಆಗಲೀ, ಇಲ್ಲ ಅವರಿಗೇ ವಾಪಸ್ ಕೊಟ್ಟರೆ, ಅವರು ಸಂಬಳ ಮತ್ತು ನಗರಸಭೆಗಳು ಮತ್ತು ಪುರಸಭೆಗಳು, ರಸ್ತೆಗಳು ಎಲ್ಲಾ ಡೆವಲಪ್‌ಮೆಂಟ್ ಮಾಡಲಿಕ್ಕೆ ಚೆನ್ನಾಗಿರುತ್ತದೆ. ಈ ರೀತಿ ಮಹಾರಾಷ್ಟ್ರದಲ್ಲಿ ಆಗುತ್ತಿದೆ. ಒಂದು ಚಿಕ್ಕ ಪುರಸಭೆಗೂ ಬಜೆಟ್ 10-15 ಕೋಟಿ ರೂ.ಇರುತ್ತದೆ. ನಾವು ಇಲ್ಲಿ ನಗರಸಭೆ ಗ್ರೇಡ್ - 1 ಇದ್ದರೂ, 3 ಕೋಟಿ ರೂ.ಗಿಂತ ಹೆಚ್ಚು ಬಜೆಟ್ ಇಡುವಂತಿಲ್ಲ. ಆಕ್ಟ್ರಾಯ್ ಇಲ್ಲದೇ ನಮಗೆ ಬಹಳಷ್ಟು ತ್ರಾಸ ಆಗುತ್ತಿದೆ. ಆಕ್ಟ್ರಾಯ್ ಇಲ್ಲದೇ ಇರುವುದಕ್ಕೋಸ್ಕರ ಮತ್ತು ನಗರಸಭೆಗಳಲ್ಲಿ ಬಹಳ ತೊಂದರೆಯಾಗುತ್ತಿದೆ. ಇವತ್ತು ನಗರಗಳು ಬಹಳ ಬೆಳೆಯುತ್ತಿವೆ. ನಗರಗಳ ಜನಸಂಖ್ಯೆ ಬಹಳ ಜಾಸ್ತಿಯಾಗುತ್ತಿದೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು, ಅವರಿಗೆ ಏನು ಮುಂದೆ ಪವರ್ಸ್ ಇತ್ತು, ಆಕ್ಟ್ರಾಯ್, ಎಂಟರ್‌ಟೈನ್‌ಮೆಂಟ್, ಮೋಟಾರ್ ವೆಹಿಕಲ್ ಟ್ಯಾಕ್ಸ್, ಇವೆಲ್ಲವುಗಳನ್ನೂ ಅವರಿಗೇ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅವರುಗಳಿಗೆ ಸಂಬಳಗಳನ್ನೂ ಕೊಡಲು ಸಾಧ್ಯವಾಗುತ್ತದೆ. ನಗರಗಳು ಎಲ್ಲಾ ಸ್ವಚ್ಛವಾಗಿರುತ್ತವೆ. ಏಕೆಂದರೆ ರೋಗಗಳು ನಗರಗಳಲ್ಲಿಯೇ ಜಾಸ್ತಿ ಹರಡುವುದು....

ಅಧ್ಯಕ್ಷರು:- ಅದನ್ನೆಲ್ಲಾ ಇನ್ನೊಮ್ಮೆ ಚರ್ಚೆ ಮಾಡೋಣ. ಹೇಳಬೇಕಾದ್ದನ್ನು ತಾವು ಹೇಳಿದ್ದೀರಿ. ಮಾನ್ಯ ಸದಾನಂದಗೌಡರು ಈ ವಿಷಯದ ಬಗ್ಗೆ ಮಾತನಾಡಬೇಕೆಂದು ನನ್ನ ಅನುಮತಿ ಕೇಳಿದ್ದೀರಿ. ನೀವೀಗ ಮಾತನಾಡಬಹುದು.

ಶ್ರೀ ಡಿ.ವಿ.ಸದಾನಂದಗೌಡ:- ನಾನು ಈಗ ಮಾತನಾಡಿದರೆ ಸುಮ್ಮನೆ ವಿಷಯಗಳ ಪುನರಾವರ್ತನೆ ಆಗುತ್ತದೆ. ಆದ್ದರಿಂದ ನಾನೀಗ ಮಾತನಾಡುವುದು ಸೂಕ್ತವಲ್ಲವೆನಿಸುತ್ತದೆ.

ಅಧ್ಯಕ್ಷರು:- ಹಾಗಿದ್ದಲ್ಲಿ ಒಳ್ಳೆಯದು. ಈಗ ಮಾನ್ಯ ರಾಜೇಂದ್ರನ್‌ರವರು ಮಾತನಾಡಬಹುದು.

ಶ್ರೀ ಎಸ್.ರಾಜೇಂದ್ರನ್:- ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುವವರಿಗೆ ಆಕ್ಟ್ರಾಯ್ ಚಾರ್ಜ್‌ನಲ್ಲಿ ಹಣ ಕೊಡುತ್ತೀರೋ ಅಥವಾ ಪ್ರೊಫೆಷನಲ್ ಟ್ಯಾಕ್ಸ್‌ನಲ್ಲಿ ಕೊಡುತ್ತೀರೋ it is not important. They are human beings. They are working for us. They are cleaning the

nasty walls. Why the Government has not taken interest to give them salsry every month? Are they not human beings? ನೀವು ಏನಾದರೂ ಕಾನೂನು ಹಾಕಿಕೊಳ್ಳಿ You make any policy, we are not worried about it. Most of these people belong to Scheduled Caste and Scheduled Tribe Community. The Government has to come forward to give them salary on the first or tenth of every month. The Hon'ble Chief Minister has to consider this with humanitarian consideration. Treat them as your citizens.

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೇ, ಹೊಸದಾಗಿ ಏನಾದರೂ ಹೇಳುವುದಿದ್ದರೆ ಮಾತನಾಡಿ. ಮಾನ್ಯ ಕರ್ಕಿಯವರೇ, ಒಂದೇ ಪಕ್ಷಕ್ಕೆ ಸೇರಿದ ಹಲವಾರು ಜನರಿಗೆ ಮಾತನಾಡಲು ಅವಕಾಶ ಕೊಡಲಿಕ್ಕೆ ನನಗೆ ಸಾಧ್ಯವಾಗುವುದಿಲ್ಲ. ತಾವು ಹೊಸದಾಗಿ ಹೇಳುವುದು ಇರಬಹುದು. ಆದರೆ ಇದು ಶೂನ್ಯ ವೇಳೆಯಾಗಿರುವುದರಿಂದ ಇತರ ಕಾರ್ಯ ಕಲಾಪಗಳಿಗೂ ನಾನು ಸಮಯ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ದಯವಿಟ್ಟು ಸಹಕರಿಸಿ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಈ ಪೌರಕಾರ್ಮಿಕರು ಚಳುವಳಿ ಮಾಡಿದಾಗ, ಜನವರಿ 1ನೇ ತಾರೀಖಿನಿಂದ ಟ್ರೆಜರಿ ಮುಖಾಂತರ ಹಣ ಪಾವತಿ ಮಾಡುತ್ತೇವೆ ಎನ್ನತಕ್ಕಂಥ ಒಂದು ಆಜ್ಞೆಯನ್ನು ಸರ್ಕಾರದವರು ಮಾಡಿದ್ದಾರೆ. ಈ ರೀತಿ ಆಜ್ಞೆಯನ್ನು ಕಳುಹಿಸಿದರೂ ಕೂಡ, ಇವತ್ತಿನವರೆಗೂ ಅದು ಜಾರಿಯಾಗುತ್ತಿಲ್ಲ. ಪೌರ ಕಾರ್ಮಿಕರು ಊರಿನ ಕಸ ಹೊಡೆಯುತ್ತಿದ್ದಾರೆ, ಆದರೆ ಅವರ ಮನೆಯಲ್ಲಿ ಉಪವಾಸ ಬೀಳುವಂತಹ ಸ್ಥಿತಿ ಬಂದಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದ್ದಾರೆ. ನಾನು ಮತ್ತೊಮ್ಮೆ ಅವುಗಳನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ತಕ್ಷಣ ತುರ್ತಾಗಿ ಆ ಕಡೆಗೆ ಗಮನ ಕೊಡಬೇಕು.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ಪೌರ ಕಾರ್ಮಿಕರ ಸಂಘದ ಪರವಾಗಿ ಅವರ ನಾಯಕರುಗಳ ತಂಡ ಒಂದು ನನ್ನ ಹತ್ತಿರ ಬಂದಿತ್ತು. ಆಮೇಲೆ ಮೂರು ತಿಂಗಳಿನಿಂದ ಸಂಬಳ ಕೊಟ್ಟಿಲ್ಲ, ಚೆಕ್ ಮೂಲಕ ಕೊಡಬೇಕು ಎಂದು ನಮ್ಮದೇ ಸರ್ಕಾರದ ಆಜ್ಞೆ ಆಗಿತ್ತು ಎಂದು ಹೇಳಿದರು. ನಿನ್ನೆ ನಾನು ಶಿವಮೊಗ್ಗ ಮುನಿಸಿಪಾಲಿಟಿ ವತಿಯಿಂದ ಪೌರ ಸನ್ಮಾನ ಸ್ವೀಕರಿಸಿ ಪೌರ ಕಾರ್ಮಿಕರ ಬೇಡಿಕೆಗಳನ್ನು ಕೇಳಿದ್ದೆ. ಹಾಗೆಯೇ ಬೇರೆ ಹಲವಾರು ಮುನಿಸಿಪಾಲಿಟಿಗಳ ಸ್ಥಿತಿಗತಿಗಳೂ ಕೂಡ ನನ್ನ ಗಮನಕ್ಕೆ ಬಂದಿದೆ. ನಮ್ಮ ದೇಶದಲ್ಲಿ ಬಾಂಬೆ ಸಿಟಿ ಕಾರ್ಪೊರೇಷನ್ ಒಂದನ್ನು ಬಿಟ್ಟರೆ, ಇನ್ನು ಎಲ್ಲವೂ ಸರ್ಕಾರದ ಅನುದಾನದ ಮೇಲೆಯೇ ನಡೆಯುತ್ತಿದೆ.

This is a very sad state of affairs of our Municipal Administration. ಇದು ಏಕೆ ಹೀಗಾಗಿದೆ? ಹುಬ್ಬಳ್ಳಿ - ಧಾರವಾಡ ಕಾರ್ಪೊರೇಷನ್ನ್‌ವರು ಸರ್ಕಾರಕ್ಕೆ 9 ಕೋಟಿ ರೂ.ಗಳನ್ನು ಬಾಕಿ ಕೊಡುವುದಿದೆ. ಹೀಗಿದ್ದರೂ ಸರ್ಕಾರಕ್ಕೆ ಮತ್ತೆ ಮತ್ತೆ ಅನುದಾನ ಕೊಡಿ ಎಂದು ಕೋರುತ್ತಾರೆ. ನಾನು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಮಾತನ್ನು ಒಪ್ಪುತ್ತೇನೆ. ಯಾವುದೇ ಸ್ಥಳೀಯ ಸಂಸ್ಥೆಗಳು ಅವರು ಸ್ವತಃ ಅವರ ಶಕ್ತಿಯ ಮೇಲೆ, ನಿಲ್ಲಬೇಕು. ಅವರ ನೌಕರರಿಗೆ ಸರ್ಕಾರಿ ಸಂಬಳ ಕೊಡುವುದು ಎಂದರೆ, ಅವರು ಸರ್ಕಾರಿ ನೌಕರರೂ ಅಲ್ಲ. ಮುನಿಸಿಪಲ್ ವರ್ಕರ್ಸ್ ಸರ್ಕಾರಿ ನೌಕರರಲ್ಲ. ಬಟ್ ಸರ್ಕಾರಿ ನೌಕರರಿಗೆ ಕೊಟ್ಟಹಾಗೆ ನಾವು ಅವರಿಗೆ ಸಂಬಳ ಕೊಡುವುದಕ್ಕೆ, ಗೌರ್ನಮೆಂಟ್ ಆದರೂ ಅದಕ್ಕೆ ಬದ್ಧವಾಗಿದೆ. ಇದು ಎಂತಹ ಡ್ಯುಯಲ್ ರೆಸ್ಪಾನ್‌ಸಿಬಿಲಿಟಿ ಅಂದರೆ ಮುನಿಸಿಪಾಲಿಟಿಯವರಿಗೆ ಉತ್ತಾದನೆ ಇಲ್ಲ. ಮುನಿಸಿಪಾಲಿಟಿಯವರು, ಯಾವಾಗಲೋ 10-20 ವರ್ಷಗಳ ಕೆಳಗೆ ಫಿಕ್ಸ್ ಮಾಡಿದ್ದಂತಹ ಹೌಸ್ ಟ್ಯಾಕ್ಸ್ ಅನ್ನು ಇನ್ನೂ ಅದೇ ದರದಲ್ಲಿ ವಸೂಲು ಮಾಡುತ್ತಿದ್ದಾರೆ. ಟೌನ್‌ಗಳು ಬಹಳ ಫಾಸ್ಟಾಗಿ ಬೆಳೆಯುತ್ತಿವೆ. ಅರ್ಬನೈಸೇಷನ್ ಆಗುತ್ತಿದೆ. ಅವರು ವಾಟರ್ ಟ್ಯಾಕ್ಸ್ ಸರಿಯಾಗಿ ಕಲೆಕ್ಟ್ ಮಾಡುವುದಿಲ್ಲ, ಎಲೆಕ್ಟ್ರಿಸಿಟಿ ಡ್ಯೂ ಇಟ್ಟುಕೊಂಡಿದ್ದಾರೆ ಇದು ಎಲ್ಲಾ ಬಹಳ ಅವ್ಯವಸ್ಥೆಯಾಗಿದೆ. ಅದಕ್ಕೆ ನಾನು ಸದನ ಒಪ್ಪುವುದಾದರೆ, ಅಥವಾ ಸರ್ವಸಮ್ಮತಿ ಇದ್ದರೆ ಆಕ್ಟ್ರಾಯ್ ಬಗ್ಗೆ ವಿಚಾರ ಮಾಡೋಣ. Why not we reintroduce it?

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಒಂದು ನಿಮಿಷ. ನೀವು ತರಾತುರಿಯಲ್ಲಿ ಏನೋ ಒಂದು ಹೇಳಿ, ಮತ್ತೇನೋ ಆಗುವುದು ಬೇಡ. ಸ್ವಲ್ಪ ನಾನು ಹೇಳುವುದನ್ನು ಕೇಳಿ. ಆಕ್ಟ್ರಾಯ್‌ನಲ್ಲಿ ಬಹಳಷ್ಟು ಲೀಕೇಜ್ ಇದೆ ಎಂದು ಆಕ್ಟ್ರಾಯ್ ಅಬಾಲಿಷ್ ಮಾಡಿದ್ದುದು. Crores of rupees has been taken over by Sales Tax Department, Turn Over Tax. ಅಲ್ಲಿ ಅಡಿಷನಲ್ ಇದೇ ಅಮೌಂಟ್ ಅನ್ನು, ಪ್ರಪೋರ್ಷನೇಟ್ಲಿ ಟ್ಯಾಕ್ಸ್ ಅನ್ನು, ಟ್ರಾನ್ಸ್‌ಫರ್ ಮಾಡಿಕೊಂಡು ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು ಕಲೆಕ್ಷನ್ ಅವರು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ತಮ್ಮ ಡ್ಯೂಟಿ ಏನೆಂದರೆ ನೀವೇನು ಕಲೆಕ್ಟ್ ಮಾಡಿದ ಹಣವನ್ನು ನೇರವಾಗಿ ಅವರಿಗೆ ಟ್ರಾನ್ಸ್‌ಫರ್ ಮಾಡಿದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಇಲ್ಲದಿದ್ದರೆ ಅಲ್ಲಿ ಲೀಕೇಜ್ ಆಗುತ್ತದೆ, ಒಂದು ರೂ. ಕಲೆಕ್ಟ್ ಆದರೆ 50 ಪೈಸೆಯೂ ಜಮಾ ಆಗುವುದಿಲ್ಲ, ಕೆ.ಎಸ್.ಆರ್.ಟಿ.ಸಿ. ಡಿಪಾರ್ಟ್‌ಮೆಂಟ್ ಆದ ಹಾಗೆ ಆಗುತ್ತದೆ ಎಂದು ತಿಳಿದುಕೊಂಡು ರಾಷ್ಟ್ರಮಟ್ಟದಲ್ಲಿ ಇದರ ಮಗ್ಗೆ ಚರ್ಚೆ ಮಾಡಿ, ಎಲ್ಲಾ ರಾಜ್ಯಗಳು ಅಬಾಲಿಷ್ ಮಾಡಿದರೂ ಮಹಾರಾಷ್ಟ್ರ ಮಾತ್ರ ಉಳಿಸಿಕೊಂಡಿತು. ಅವರು ಏಕೆ ಉಳಿಸಿಕೊಂಡರು ಎಂದರೆ ಅವರ ರಾಜ್ಯಕ್ಕೆ ಒಂದೇ ಗೇಟ್ ಇದೆ. ಎಲ್ಲಾ ಕಡೆ ಸಮುದ್ರ ಇದೆ. ಎಲ್ಲಾ ರೀತಿಯ ಟ್ರಾನ್ಸ್‌ಪೋರ್ಟ್ ಒಂದೇ ಗೇಟಿನಿಂದ ಆಗುತ್ತದೆ. ಅದಕ್ಕಾಗಿ ಮಹಾರಷ್ಟ್ರ ಸರ್ಕಾರ ಮಾತ್ರ ಆಕ್ಟ್ರಾಯ್ ಅನ್ನು ಉಳಿಸಿಕೊಂಡಿದೆ, ಅಷ್ಟೇ ಹೊರತಾಗಿ, ಬೇರೆ ಇಡೀ ರಾಷ್ಟ್ರದಲ್ಲೇ ಟ್ರಾನ್ಸ್‌ಪೋರ್ಟ್

ಸುಗಮ ಆಗಬೇಕೆಂದು ಹೇಳಿ, ಪ್ರತಿಯೊಂದೂ ಎಕ್ಸ್‌ಪ್ಲಾಯ್ಟ್ ಆಗುತ್ತದೆ, ಊರೂರಿಗೆ ನಿಲ್ಲಬೇಕಾಗುತ್ತದೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರ ಅಭಿಪ್ರಾಯ ಏನೆಂದರೆ, ಆಕ್ಟ್ರಾಯ್ ಜಾರಿಗೆ ತರುವುದು ಬೇಡ, ತತ್‌ಕ್ಷಣ ಅದನ್ನು ಜಾರಿಗೆ ತರಬೇಡಿ, ಹಿಂದೆ ಲೂಟಿಯಾಗುತ್ತಿತ್ತು.....

ಶ್ರೀ ಜೆ.ಹೆಚ್.ಪಟೇಲ್:- ನಾನು ಏನು ಹೇಳಿದ್ದುದು ಎಂದರೆ, ಆಕ್ಟ್ರಾಯ್ ಅನ್ನು ಇಂಟ್ರಡ್ಯೂಸ್ ಮಾಡುತ್ತೇನೆ ಎಂದಲ್ಲ, ಸದನದ ಗೈಡೆನ್ಸ್ ಇಲ್ಲದೇ How can I take that decision?

ಅಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಈ ಕಡೆ ಆಕ್ಟ್ರಾಯ್ ಅನ್ನೂ ಕೊಡುವುದಿಲ್ಲ, ಆ ಕಡೆ ಸೇಲ್ಸ್ ಟ್ಯಾಕ್ಸ್‌ಅನ್ನೂ ಕೊಡುವುದಿಲ್ಲ ಎನ್ನುವುದಾದರೆ ಪುರಸಭೆಗಳ ಗತಿಯೇನು? ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಇಲ್ಲಿ ಚರ್ಚೆಯಾಗಲಿ, ಅದರ ಬಗ್ಗೆ ಅಭ್ಯಂತರವಿಲ್ಲ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಅವಕಾಶ ಕೊಡಿ.

+ಶ್ರೀ ಜೆ.ಹೆಚ್.ಪಟೇಲ್:- ಚರ್ಚೆಯಾಗುವುದು ಒಂದೆಡೆ ಇರಲಿ. ಇವತ್ತಿನ ಸಮಸ್ಯೆಗೆ ನಾನೇನು ಹೇಳಿದೆ ಎಂದರೆ, ಅವರ ಸಭೆಗೆ ಹೋಗಿದ್ದೆ. ಹೋಗಿ ಬಿಟ್ಟು ಈಗ ಸಧ್ಯಕ್ಕೆ ಏನು ತಾತ್ಕಾಲಿಕ ಪರಿಹಾರ ಕೊಡಬೇಕು ಎನ್ನುವುದನ್ನು ಇನ್ನು ಒಂದು ವಾರದೊಳಗಾಗಿ ತಿಳಿಸುತ್ತೇನೆ, ಇದಕ್ಕೆ ದೀರ್ಘಕಾಲಿಕವಾಗಿ ಮುನಿಸಿಪಾಲಿಟಿಗಳು ತಮ್ಮ ಸ್ವಶಕ್ತಿಯಿಂದ ತಮ್ಮ ನೌಕರರುಗಳಿಗೆ ಸಂಬಳ ಕೊಡುವುದಕ್ಕೆ ಆಗದೇ ಇದ್ದರೆ, ಆ ಮುನಿಸಿಪಾಲಿಟಿಗಳಿಗೆ ಏನು ಮಾಡಬೇಕು? ಅವರಿಗೆ ರೇಟ್ ರಿವೈಸ್ ಮಾಡಬೇಕೇ ಅಥವಾ ಬರೀ ನಮ್ಮ ಸರ್ಕಾರದ ಹೆಸರಿನಲ್ಲಿರುವ ಟ್ಯಾಕ್ಸ್ ಕಲೆಕ್ಷನ್ ಅನ್ನು ಅವರಿಗೆ ಟ್ರಾನ್ಸ್‌ಫರ್ ಮಾಡಬೇಕೇ I am equally interested. ಆಕ್ಟ್ರಾಯ್ ತೆಗೆದಿರುವುದು ಏನೋ ಬಹಳ ಸಿದ್ಧಾಂತವಲ್ಲ. ಯಾವುದೋ ಒಂದು ಕಾಲದಲ್ಲಿ ಇಂತಹ ಕಡೆ ಹಣ ಸೋರಿ ಹೋಗುತ್ತದೆ, ಅದು ಸೋರಿ ಹೋಗಬಾರದು, ನಾವು ಅದನ್ನು ಕಲೆಕ್ಟ್ ಮಾಡಿ ಇವರ ಕಡೆಗೆ ಕೊಡಬೇಕು ಎಂದು ಅದು ಆಗಿಲ್ಲ, ಅನುಭವ ಬೇರೆ, ನಮ್ಮ ವಿಚಾರ ಬೇರೆ ಇತ್ತು. ಆದ್ದರಿಂದ, ಇವತ್ತು ನಾನು I am not taking any decision on it. ಸದನದಲ್ಲಿ ಬೇಕಾದರೆ ಆ ಬಗ್ಗೆ ವಿಚಾರ ಮಾಡೋಣ, ಅದರ ಸತ್ಯ, ಅದರ ವಾದ ವಿವಾದಗಳನ್ನು ನೋಡೋಣ. ಈಗ ಸಧ್ಯಕ್ಷೆ ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಪೌರ ಕಾರ್ಮಿಕರ ಸಂಘಕ್ಕೆ ಇಷ್ಟು ಹೇಳುತ್ತೇನೆ. ಪೌರಕಾರ್ಮಿಕರಿಗೆ, ಹತ್ತಾರು ಸಾವಿರ ಜನ ಬಂದಿದ್ದಾರೆ, I went to them, directly I went to them. ಹೋಗಿ ಬಿಟ್ಟು, ಈಗ ಯಾವುದು ಅಶಾಂತಿಗೆ ಅವಕಾಶ ಮಾಡಬೇಡಿ, ನಾನು ಒಂದು ವಾರದೊಳಗಾಗಿ ತತ್‌ಕ್ಷಣ ಏನು ಮಾಡುತ್ತೇವೆ ಎಂದು ಹೇಳುತ್ತೇನೆ, ಅನಂತರ ನಾನು

ಎಲ್ಲರನ್ನೂ ಕರೆದು ಮಾತನಾಡಿ, ಏನು ಮಾಡಬೇಕು ಎಂದು ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಅವರಿಗೆ ಹೇಳಿ ಬಂದಿದ್ದೇನೆ. ಆದ್ದರಿಂದ ಮತ್ತೊಮ್ಮೆ ನಾನು ಅವರಿಗೆ ಅಪೀಲ್ ಮಾಡಿಕೊಳ್ಳುತ್ತೇನೆ, I will take up, I will give them some relief.

12.40 ಪಿ.ಎಂ.

ಡಾ:ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯ್ ಜಾರಿಗೆ ಬರಬೇಕಾದರೆ, ಒಂದು ಸಣ್ಣ ಮಾತು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅನೇಕ ಪುರಸಭೆಗಳು ಸ್ವಯಂ ತಾವೇ ತಮ್ಮ ಕಾಲಿನಲ್ಲಿ ನಿಲ್ಲತಕ್ಕಂತಹ ಸಾಮರ್ಥ್ಯ ಹೊಂದಿದ್ದವು. ಆಕ್ಟ್ರಾಯ್ ತೆಗೆದ ಮೇಲೆ ಕಳೆದ ವರ್ಷ ಎಷ್ಟು ಆಕ್ಟ್ರಾಯ್ ಹಣ ಬಂದಿತು, ಅದಕ್ಕೆ ಪ್ರತಿ ವರ್ಷ 10 ಪರ್ಸಂಟ್ ಆ್ಯಡ್ ಮಾಡುತ್ತಾ ಹೋಗುತ್ತಾರೆ. Only 10% addition not on the entire tax collected... 20 ಪರ್ಸೆಂಟ್ ಅಡಿಷನ್ ಮಾಡುತ್ತಾ ಹೋಗುತ್ತಾರೆ. ಈ ಆಕ್ಟ್ರಾಯ್ ಟ್ಯಾಕ್ಸ್ ಅನೇಕ ವಿಷಯಗಳಲ್ಲಿ that has been on the price not on the quantity..... ಪ್ರೆಸಸ್ 10 ಪಟ್ಟು ಜಾಸ್ತಿಯಾಗಿವೆ. ಕೊಡತಕ್ಕಂತಹ 10 ಪರ್ಸೆಂಟ್ ಮಾತ್ರ ಜಾಸ್ತಿ ಆಯಿತು.

ಅಧ್ಯಕ್ಷರು:- ಈ ಸಬ್ಜೆಕ್ಟ್ ಡಿಸ್ಕಷನ್‌ಗೆ ತೆಗೆದುಕೊಂಡಾಗ you can participate as Hon'ble Chief Minister put it...

ಡಾ:ಎಂ.ಪಿ.ಕರ್ಕಿ: ಡಿಸ್ಕಷನ್ ಆಗುವುದಾದರೆ ಮಾಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ:- ಆಕ್ಟ್ರಾಯ್ ಪ್ರಶ್ನೆ ಅಲ್ಲ, ನಾನು ಹೇಳುತ್ತೇನೆ, ಈ ಜನವರಿಯಿಂದ ಕೊಡುತ್ತೇವೆಂದು ಹಿಂದೆ ಆರ್ಡರ್ ಕೊಟ್ಟಿದ್ದಾರೆ.

ಅಧ್ಯಕ್ಷರು:- ನಿಮಗೆ ಕನ್ನಡದಲ್ಲಿ ಹೇಳುವುದೂ ಕೂಡ ಗೊತ್ತಾಗುವುದಿಲ್ಲ. ಅವರು ಹೇಳಿದರು ನಾನು ನೇರವಾಗಿ ಅವರ ಹತ್ತಿರ ಹೋಗಿ ಬಂದಿದ್ದೇನೆ, ಒಂದು ವಾರದ ಒಳಗೆ ಅವರಿಗೆ ತಾತ್ಕಾಲಿಕ ಪರಿಹಾರ ಕೊಡುತ್ತೇವೆ, ಶಾಶ್ವತವಾಗಿ ಇದನ್ನು ಏನು ಮಾಡಬೇಕೆಂಬ ಬಗ್ಗೆ ಸದನದಲ್ಲಿ ಇಟ್ಟು ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಹಾಗಾದರೆ ಹಿಂದೆ ಆರ್ಡರ್ ಕೊಟ್ಟಿದ್ದಕ್ಕೆ ಬೆಲೆ ಇಲ್ಲವೇ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ತಾತ್ಕಾಲಿಕವಾಗಿ ಮಾಡುತ್ತಾರೆ ಸರಿ, ಅವರ ಹಿಂದಿನ ಆರ್ಡರ್ ಬಗ್ಗೆ ಧರಣಿ ಮಾಡೋಣ.

ಶ್ರೀ ಬಿ.ಮುನಿಯಪ್ಪ:- ಅದರ ಬಗ್ಗೆ ಚರ್ಚೆ ಮಾಡೋಣ. ಆಕ್ಟ್ರಾಯ್ ತಂದರೆ ನಿಜವಾಗಿಯೂ ಪುರಸಭೆಗಳು ಗುಲಾಮರಂತೆ ಇರದೆ ಅವರು ಯಾರ ಹತ್ತಿರವೂ ಕೈಚಾಚದೆ ಇರುವುದಕ್ಕೆ ಸಾಧ್ಯ.